**ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ *12.08.2024* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ**

**ಈ ಹಂತದಲ್ಲಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

. ಆ ದಿನ ಮದ್ಯಾಹ್ನ 12.15 ಕ್ಕೆ ನಾನು ಮನೆ ಹೊರಗಡೆ ಇದ್ದಾಗ ಪಕ್ಕದ ಮನೆಯ ಮುಂದೆ ಕುಳಿತಿದ್ದ ನನ್ನ ಮಗಳು ಹರ್ಷಿತಾಳಿಗೆ ಆರೋಪಿತ ತಲೆ ಜುಟ್ಟು ಹಿಡಿದುಕೊಂಡು ಚಾಕುವಿನಿಂದ ಹೊಟ್ಟೆ ಮತ್ತು ಕತ್ತಿಗೆ ಚುಚ್ಚಿದ್ದನ್ನು ನೋಡಿದ ನಾನು ಹತ್ತಿರ ಹೋಗಿ ಚಾಕುವನ್ನು ಹಿಡಿದುಕೊಂಡಾಗ ನನ್ನ ಎರಡು ಕೈಗಳಿಗೆ ಗಾಯವಾಗಿತ್ತು ಎಂದರೆ ನಿಜ. ಸಾಕ್ಷಿ ಸ್ವತಃ ಹೇಳುತ್ತಾರೆ ಆರೋಪಿತ ಆ ದಿನ ನನ್ನನ್ನು ಸಾಯಿಸಬೇಕು ಎಂದು ಚುಚ್ಚಲು ಪ್ರಯತ್ನ ಮಾಡಿದ್ದ. ದಿಃ*08.07.2023* ರಂದು ಸಂಜೆ *9* ಗಂಟೆಗೆ ಆರೋಪಿತ ನಮ್ಮ ಮನೆಗೆ ಬಂದು ನನ್ನ ಮಗಳನ್ನು ಜೊತೆಯಲ್ಲಿ ಕಳುಹಿಸುವಂತೆ ಕೇಳಿದಾಗ ನಾನು ನಿನ್ನ ಭಾವ ಮತ್ತು ಅಮ್ಮನನ್ನು ಕರೆದುಕೊಂಡು ಬಾ ಅವರೊಂದಿಗೆ ಕಳುಹಿಸುತ್ತೇನೆ ಎಂದು ಹೇಳಿದ್ದೆ ಎಂದರೆ ನಿಜ.

**ಪಾಟೀ ಸವಾಲುಃ** ಮುಂದೂಡಲಾಯಿತು

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*